SRI C.BYREGOWDA: The report of the deputy commissioner is not a Statutory Report. ಇದು ಸ್ಟ್ಯಾಚ್ಯುಟ್ ಪ್ರಕಾರ ಫಿಕ್ಸ್ ಮಾಡಿದ್ದೇವೆ. ಮಾರ್ಕೆಟ್ ಪ್ರಕಾರ ಫಿಕ್ಸ್ ಮಾಡಿದ್ದಾರೆ. The report of the deputy commissioner cannot overrule an Act. It cannot overrule a rule.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಇಲ್ಲ, ನೀವು ಓವರ್‌ರೂಲ್ ಮಾಡಬೇಡಿ. ನೀವು ಕೋ-ಆಪರೇಟೀವ್ ಬ್ಯಾಂಕ್‌ನಿಂದ ಕ್ರಾಪ್ ಇನ್ಸೂರೆನ್ಸ್ ಹಣವನ್ನು ಪಡೆಯಬೇಕಾದರೆ ಯಾವ ಮಾರ್ಗ? ಇದೇ ತಾನೇ? ಈ ಮಾರ್ಗದಿದ ಹಣವನ್ನು ಅವರಿಗೆ ತೆಗೆದುಕೊಳ್ಳಬೇಕು ಎಂದರೆ ನಿಮ್ಮ ಅಧಿಕಾರಿಗಳು ಕೆಲಸ ಮಾಡಬೇಕೋ ಇಲ್ಲವೋ? ಕಾನೂನು ಇದೆ, ಆ ಕಾನೂನು ಪ್ರಕಾರ ನೀವು ಕೆಲಸ ಮಾಡಿಲ್ಲ ಎಂದು ಹೇಳುತ್ತಿದ್ದೇನೆ.

ಶ್ರೀ ಸಿ.ಬೈರೇಗೌಡ: ನಾನು ಕಾನೂನು ಓದುತ್ತೇನೆ. Sir, as per section 194 of the karnataka Land Revenue Act, 1964, Anewari has to be declared with result to various crops. The Anewari is declared once in a year taking into account, both, Rabi and kharif crops.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನನಗೆ ಗೊತ್ತಿದೆ. ಗೊತ್ತಿದ್ದು ನೀವು ಏನು ಮಾಡುತ್ತಿಲ್ಲವೆಂದು ಹೇಳುತ್ತಿದ್ದೇನೆ. ಬೆಳೆ ಏನು ಫೇಲ್ ಆಗಿದೆ, ತೊಗರಿ, ಉದ್ದು, ಕಡಲೆ ಇದನ್ನು ಫೆಲ್ಯೂರ್ ಆದಾಗ ಈ ವರ್ಷ ಮುಗಿಯಿತಲ್ಲಾ, ನವೆಂಬರ್ - ಡಿಸೆಂಬರ್‌ನಲ್ಲಿ ನೀವು ತಕ್ಷಣ ಸಂಬಂಧಪಟ್ಟಂತಹ ಅಧಿಕಾರಿಗಳಿಗೆ ಹೇಳಿ ಎಲ್ಲಿ ಇನ್ಸೂರ್ ಮಾಡಿದ್ದಾರೆ, ಇನ್ಸೂರ್ ಮಾಡದೇ ಇದ್ದಲ್ಲಿ ನೀವು ಡಿಸ್ಕ್ರಿಷನ್ ಉಪಯೋಗ ಮಾಡಿಕೊಂಡು ಅವರಿಗೆ ಏನು ಕಾಂಪನ್ಸೇಷನ್ ಕೊಡಬೇಕೋ ಅದನ್ನು ಕೊಡಿಸಬಹುದು. ಆದರೆ ಎಲ್ಲಿ ಇನ್ಸೂರ್ ಮಾಡಿದ್ದು, ಯಾವ ಬ್ಯಾಂಕುಗಳು ಕೊಡುವುದಕ್ಕೆ ತಯಾರು ಇದೆ ಅಂತಹ ಕಡೆ ನಿಮ್ಮ ರಿಪೋರ್ಟ್ ಇಲ್ಲ. ಹೀಗಾದರೆ ಕೇಂದ್ರ ಸರ್ಕಾರದಿಂದ ಆಗಲಿ, ಇನ್ಸೂರೆನ್ಸ್ ಡಿಪಾರ್ಟ್‌ಮೆಂಟ್‌ನಿಂದಾಗಲಿ ಹಣ ಹೇಗೆ ಬರುತ್ತದೆ? ಅದಕ್ಕೆ ನೀವು ಇದರಲ್ಲಿ ಸಂಪೂರ್ಣವಾಗಿ ವಿಫಲರಾಗಿದ್ದೀರಿ ಹಾಗೂ ಸದನ ಸಮಿತಿ ಮಾಡುವುದಕ್ಕೆ ತಯಾರಿಲ್ಲ. ಇದನ್ನು ನಾವು ವಿರೋಧಿಸುತ್ತಾ ಸಭಾತ್ಯಾಗ ಮಾಡುತ್ತೇವೆ.

(ಈ ಹಂತದಲ್ಲಿ ಮಾನ್ಯ ಕಾಂಗ್ರೆಸ್ ಸದಸ್ಯರುಗಳು ಸಭಾತ್ಯಾಗ ಮಾಡಿದರು)

ಶ್ರೀ ವಾಟಾಳ್ ನಾಗರಾಜ್ (ಚಾಮರಜ ನಗರ): ಮಾನ್ಯ ಅಧ್ಯಕ್ಷರೇ, ಶಾಶ್ವತ ಪರಿಹಾರದ ಬಗ್ಗೆ ನೀವು ಏನೂ ಚಕಾರ ಎತ್ತಲಿಲ್ಲ. ಪರಿಣಾಮಕಾರಿಯಾಗಿ ನೀವು